(25)

## ಸರ್ಕಾರದ ಆದೇಶ ಸಂಖ್ಯೆ: ಹಿಂವಕ 467 ಬಿಎಂಎಸ್ 2015, ಬೆಂಗಳೂರು, ದಿನಾಂಕ: 05.08.2015ಕ್ಕೆ ಅನುಬಂಧ

**ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಸಾಂಪ್ರದಾಯಿಕ ವೃತ್ತಿದಾರರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಹಾಗೂ ಮಾರುಕಟ್ಟೆ ಜಾಲ ಏರ್ಪಡಿಸಲು ಗ್ರಾಮ ಪಂಚಾಯತ್ ಹಾಗೂ ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ ಅಂದಾಜು 1.5 ಲಕ್ಷ ರೂ.ಗಳ ವೆಚ್ಚದಲ್ಲಿ ಮಳಿಗೆ ಸ್ಥಾಪನೆಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಿ ಸೌಲಭ್ಯ ಒದಗಿಸಲು ರೂಪಿಸಲಾದ ಕಾರ್ಯಕ್ರಮದ ನಿಯಮ ಮತ್ತು ಮಾರ್ಗಸೂಚಿಗಳು.**

1. **ಯೋಜನೆ ಉದ್ದೇಶ:–** ಸಾಂಪ್ರದಾಯಿಕ ವೃತ್ತಿದಾರರು ಕೈಗೊಳ್ಳುವ ಸಾಂಪ್ರದಾಯಿಕ ವೃತ್ತಿಗಳಿಗೆ ಸಾಂಪ್ರದಾಯಿಕ ಉತ್ಪನ್ನಗಳಿಗೆ (ಲ್ಯಾಂಡ್ರಿ ಘಟಕ, ಸೇವಿಂಗ್ ಸಲೂನ್, ಕುಂಬಾರಿಕೆ ಉತ್ಪನ್ನಗಳ ಮಾರಾಟ, ಕಮ್ಮಾರಿಕೆ/ಕೃಷಿ ಉಪಕರಣಗಳು) ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಮಳಿಗೆ ಸ್ಥಾಪಿಸಲು ಆರ್ಥಿಕ ನೆರವು ನೀಡುವುದು.

2. **ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:–**

ಅ. ಈ ಯೋಜನೆಯಲ್ಲಿ ಮಳಿಗೆ ಸ್ಥಾಪಿಸುವ ಸೌಲಭ್ಯ ಪಡೆಯಲು ಅಭ್ಯರ್ಥಿಯು ದಿನಾಂಕ: 30/03/2002ರ ಸಂಖ್ಯೆ: ಸಕಇ 225 ಬಿಸಿಎ 2000 ಆದೇಶದಲ್ಲಿ ಗುರ್ತಿಸಿದ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಮತ್ತು ಅದರ ಉಪ ಸಮುದಾಯಗಳನ್ನು ಹಾಗೂ ಅಲ್ಪಸಂಖ್ಯಾತರ ನಿಗಮದ ವ್ಯಾಪ್ತಿಗೆ ಒಳಪಡುವ ಫಲಾನುಭವಿಗಳನ್ನು ಹೊರತು ಪಡಿಸಿ)

ಆ. ಅರ್ಜಿದಾರರು ಆಯಾ ಸಮುದಾಯದ ಸಾಂಪ್ರದಾಯಿಕ ವೃತ್ತಿ ನಿರ್ವಹಿಸುತ್ತಿರಬೇಕು.

ಇ. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ.40,000/–ಗಳ ಹಾಗೂ ನಗರ ಪ್ರದೇಶದವರಿಗೆ ರೂ.55,000/–ಗಳನ್ನು ಮೀರಿರಬಾರದು.

ಈ. ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.

ಉ. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.

ಊ. ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.

ಋ. ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.

ಎ. ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.3ರಷ್ಟು ಮೀಸಲು ನಿಗದಿಪಡಿಸಿದೆ.

ಏ. ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಒಂದುಬಾರಿ ಮಾತ್ರ ಸೌಲಭ್ಯ ಒದಗಿಸಲಾಗುವುದು.

ಐ. ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

......1

ಒ. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್/ಷೆಡ್ಯೂಲ್ ಬ್ಯಾಂಕ್/ಗ್ರಾಮೀಣ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

ಓ. ಅರ್ಜಿದಾರರು ಮಳಿಗೆ ಸ್ಥಾಪಿಸಲು ಸ್ವಂತ ನಿವೇಶನ/ಸರ್ಕಾರದಿಂದ ಮಂಜೂರಾದ/ ದೀರ್ಘಾವಧಿ ಲೀಸ್ಡ್ ನಿವೇಶನ ಹೊಂದಿರಬೇಕು.

3. **ಘಟಕ ವೆಚ್ಚ, ಸಾಲದ ಮೊತ್ತ ಮತ್ತು ಸಹಾಯಧನ:–**

I. **ಸಾಂಪ್ರದಾಯಿಕ ವೃತ್ತಿದಾರರ ಕೈಗೊಳ್ಳುವ ವೃತ್ತಿಗೆ:**

1) ಗ್ರಾಮಪಂಚಾಯ್ತಿ/ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ **(12'x10'** ಅಡಿ ವಿಸ್ತೀರ್ಣದಲ್ಲಿ) ಮಳಿಗೆ ಸ್ಥಾಪಿಸಲು ರೂ.1,50,000/–ಗಳು ಸೌಲಭ್ಯ, ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲವಾಗಿರುತ್ತದೆ.

2) ಮಳಿಗೆ ನಿರ್ಮಾಣ ವೆಚ್ಚ ಹಾಗೂ ಉಳಿಕೆ ಮೊತ್ತವನ್ನು ವೃತ್ತಿ ಅಭಿವೃದ್ಧಿಗೆ ಅವಶ್ಯವಿರುವ ಆಧುನಿಕ ಉಪಕರಣಕೊಂಡುಕೊಳ್ಳುವುದು ಮತ್ತು ದುಡಿಮೆ ಬಂಡವಾಳಕ್ಕೆ ಉಪಯೋಗಿಸಿಕೊಳ್ಳುವುದು.

4. **ಫಲಾನುಭವಿಗಳ ಆಯ್ಕೆ ಮತ್ತು ಯೋಜನೆಗಳ ಅನುಷ್ಠಾನ:–** ಸರ್ಕಾರದ ಆದೇಶ ಸಂಖ್ಯೆ/ಸಕಇ/221/ಬಿಸಿಎ/2008, ದಿನಾಂಕ:02/01/2009ರ ಆದೇಶದಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳ ಮತ್ತು ಗಂಗಾಕಲ್ಯಾಣ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿನ ರಚಿಸಿರುವ ಆಯ್ಕೆ ಸಮಿತಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

5. **ಆಯ್ಕೆ ಸಮಿತಿಯ ಕರ್ತವ್ಯಗಳು:–**

1) ಆಯ್ಕೆ ಸಮಿತಿಯು ಈ ಯೋಜನೆಯಲ್ಲಿ ನಿಗದಿಪಡಿಸಿದ ಗುರಿಯನ್ವಯ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸಿ, ನಿಗದಿತ ಅವಧಿಯೊಳಗ ಅರ್ಜಿಗಳನ್ನು ಸ್ವೀಕರಿಸುವುದು.

2) ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢಿಕರಿಸಿಕೊಂಡು ಅಂತಹ ಅರ್ಹ ಅರ್ಜಿಗಳನ್ನು ಆಯ್ಕೆ ಸಮಿತಿ ಮುಂದೆ ಪಟ್ಟಿ ಮಾಡಿ ಮಂಡಿಸಬೇಕು.

3) ಆಯ್ಕೆ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯಿಂದ ಸಾಲ ಮಂಜೂರು ಮಾಡಿ, ಪ್ರಸ್ತಾವನೆಯನ್ನು ಅನುಮೋದಿಸಿ ಸಾಲ ಮಂಜೂರಾತಿ ನೀಡಿದ ಫಲಾನುಭವಿಗಳಿಗೆ ಸಾಲದ ಮೊತ್ತವನ್ನು ಬಿಡುಗಡೆ ಮಾಡಲು ಮಂಜೂರಾತಿ ಪ್ರಸ್ತಾವನೆಯನ್ನು ನಿಗಮದ ಕೇಂದ್ರ ಕಛೇರಿ/ವಿಭಾಗೀಯ ಕಛೇರಿಗೆ ಕಳುಹಿಸಬೇಕು.

4) ಫಲಾನುಭವಿಯ ಹೆಸರು ಮತ್ತು ಪೂರ್ಣ ವಿಳಾಸ, ಜಾತಿ/ಆದಾಯ, ಜಾಮೀನುದಾರರ ಹೆಸರು ಮತ್ತು ಪೂರ್ಣ ವಿಳಾಸ, ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಯ (ಸರ್ವೆ ನಂ, ಜಮೀನಿನ ವಿಸ್ತೀರ್ಣ, ಅಂದಾಜು ಮೌಲ್ಯ ಇತ್ಯಾದಿ) ವಿವರ, ಸಾಲದ ಮೊತ್ತ, ಸಹಾಯಧನ, ಮಂಜೂರು ಮಾಡಿದ ಒಟ್ಟು ಮೊತ್ತ ಹಾಗೂ ಸಾಲದ ಉದ್ದೇಶ ಈ ಎಲ್ಲಾ ಅಂಶಗಳನ್ನು ಮಂಜೂರಾತಿ ಪ್ರಸ್ತಾವನೆಯಲ್ಲಿ ನಮೂದಿಸುವುದು.

.....2

5) ಅರ್ಜಿದಾರರು ಮಳಿಗೆ ಸ್ಥಾಪಿಸಲು ಹೊಂದಿರುವ ನಿವೇಶನದ ಮೂಲ ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಿಕೊಳ್ಳುವುದು.

6. <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:-</u> ಅರ್ಜಿದಾರರು ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಗೆ ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ಈ ಕೆಳಕಂಡ ದಾಖಲಾತಿಗಳೊಂದಿಗೆ ಸಲ್ಲಿಸಬೇಕು.

1. ಹಿಂದುಳಿದ ವರ್ಗಗಳಿಗೆ ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶಿಲ್ದಾರ್ ರಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
2. ಅರ್ಜಿದಾರರು ಮುಖ್ಯ ಕಸುಬಾಗಿ ನಿರ್ವಹಿಸುತ್ತಿರುವ ಬಗ್ಗೆ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ಬಗ್ಗೆ ಸ್ವಯಂ ಧೃಡೀಕರಣ ನೀಡಬೇಕು.
3. ಅರ್ಜಿದಾರರ ವಾಸದ ಪುರಾವೆಗಾಗಿ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಧೃಡೀಕೃತ ಪ್ರತಿ ಒದಗಿಸಬೇಕು.
4. ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.
5. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್/ಷೆಡ್ಯೂಲ್ ಬ್ಯಾಂಕ್/ಗ್ರಾಮೀಣ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು. ಪುರಾವೆಗಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
6. ಜಾಮೀನುದಾರರ ಒಪ್ಪಿಗೆ ಪತ್ರ (ನೋಟರಿ ಮಾಡಿಸಿರಬೇಕು).
7. ಅರ್ಜಿದಾರರ ಹಾಗೂ ಜಾಮೀನುದಾರರ ಆಸ್ತಿ ಮತ್ತು ಋಣಭಾರಗಳ ಘೋಷಣಾ ಪತ್ರ (ನಿಗದಿತ ನಮೂನೆಯಲ್ಲಿ)
8. ಅರ್ಜಿದಾರರು ಮಾರುಕಟ್ಟೆ ಮಳಿಗೆ ಸ್ಥಾಪಿಸಲು ಹೊಂದಿರುವ ನಿವೇಶನವನ್ನು ನಿಗಮದ ಹೆಸರಿಗೆ ಆಧಾರ ಮಾಡಿಕೊಡುವ ಬಗ್ಗೆ ಒಪ್ಪಿಗೆ ಪತ್ರ **(ಸರಳ ನೋಂದಾಯಿತ ಅಡಮಾನ ಪತ್ರದ ಮೂಲಕ) (Simple Registered Mortgage Deed).**
9. ಸಾಲದ ಭದ್ರತೆಗೆ ಅರ್ಜಿದಾರರು ಮಾರುಕಟ್ಟೆ ಮಳಿಗೆ ಸಂಬಂಧಿಸಿದಂತೆ ಸ್ಥಿರಾಸ್ತಿಯ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಒದಗಿಸಬೇಕು.

- ಸಾಲದ ಭದ್ರತೆಗೆ ನೀಡುವ ಸ್ಥಿರಾಸ್ತಿಯ ಮೂಲ ಪತ್ರ
- ಮ್ಯೂಟೇಷನ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ
- ಪಿತ್ರಾರ್ಜಿತ ಆಸ್ತಿಯಾಗಿದ್ದಲ್ಲಿ : (1) ಪಿತ್ರಾರ್ಜಿತ ಆಸ್ತಿಯಾಗಿರುವ ಬಗ್ಗೆ ಕಂದಾಯ ನಿರೀಕ್ಷಕರಿಂದ ದೃಢೀಕರಣ (2) ಆಸ್ತಿ ವಿಭಾಗ ಪತ್ರ.
- ಜಮೀನು ಆಗಿದ್ದಲ್ಲಿ ಚಾಲ್ತಿ ವರ್ಷದ ಪಹಣಿ ಪತ್ರ ಮತ್ತು ಲಾವಣಿ ಪತ್ರ
- ಚಾಲ್ತಿ ವರ್ಷದವರೆಗೆ ಕಂದಾಯ ಪಾವತಿಸಿದ ರಶೀದಿ
- ಖಾತಾ ಎಕ್ಸ್‌ಟ್ರಾಕ್ಟ್ ಮತ್ತು ಪಟ್ಟಾಪುಸ್ತಕ.
- ಸ್ಥಿರಾಸ್ತಿಯ ಚೆಕ್ಕು ಬಂದಿ.
- ಇ.ಸಿ. (13 ವರ್ಷಗಳದ್ದು) ನಮೂನೆ-15ರಲ್ಲಿ
- ಉಪನೋಂದಣಾಧಿಕಾರಿಗಳಿಂದ ಪಡೆದ ಸ್ಥಿರಾಸ್ತಿಯ ಮೌಲ್ಯ ನಿರ್ಣಯ ವರದಿ.

.....3

➤ ಅರ್ಜಿದಾರರ ವಂಶವೃಕ್ಷ. (ವಂಶವೃಕ್ಷದಲ್ಲಿ ತೋರಿಸಿರುವ ಕಾನೂನು ಬದ್ಧ ಹಕ್ಕುದಾರರಿಂದ ಆಸ್ತಿಯನ್ನು ನಿಗಮಕ್ಕೆ ಆಧಾರ ಮಾಡುವ ಬಗ್ಗೆ ಒಪ್ಪಿಗೆ ಪತ್ರ (ನೋಟರಿ ಮಾಡಿಸಿರಬೇಕು)

10. ಕನಿಷ್ಠ **12'x10'** ಅಡಿ ವಿಸ್ತೀರ್ಣದಲ್ಲಿ ಮಳಿಗೆ ಸ್ಥಾಪಿಸಲು ಅಂದಾಜು ವೆಚ್ಚ ಹಾಗೂ ನೀಲಿ ನಕಾಶೆ ಅಭಿಯಂತರರಿಂದ ತಯಾರಿಸಬೇಕು ಹಾಗೂ **PRED/PWD** ತಾಂತ್ರಿಕ ಮಂಜೂರಾತಿ ಪಡೆಯಬೇಕು.
11. ಗ್ರಾಮಪಂಚಾಯತ್/ಪಟ್ಟಣ ಪಂಚಾಯತ್ ಮಳಿಗೆ ಸ್ಥಾಪನೆಗೆ ಪರವಾನಿಗೆ ಪಡೆದು ದಾಖಲೆಗಳೊಂದಿಗೆ ಸಲ್ಲಿಸಬೇಕು.
12. <u>ಸಾಲ ಮಂಜೂರಾತಿಯ ವಿಧಾನ:-</u>

a) ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.

b) ಪ್ರವರ್ಗಾವರು ಮೀಸಲಾತಿ ಅನುಪಾತ 4:15:4:5ರಂತೆ ಸೌಲಭ್ಯ ಒದಗಿಸುವುದು.

c) ಅರ್ಹ ಅರ್ಜಿಗಳ ಪಟ್ಟಿ ಮಾಡಿ ಆಯ್ಕೆ ಸಮಿತಿಗೆ ಮಂಡಿಸುವುದು.

d) ಆಯ್ಕೆ ಸಮಿತಿಯು ಪಟ್ಟಿಯಲ್ಲಿರುವ ಅರ್ಜಿದಾರರು ಕೈಗೊಳ್ಳುವ ಉದ್ದೇಶದ ಲಾಭದಾಯಕತೆ ಮತ್ತು ಸಮಂಜಸತೆ, ಅನುಭವ, ಮರುಪಾವತಿ ಇಚ್ಛಾಶಕ್ತಿ, ಸಾಲದ ಭದ್ರತೆಗೆ ಒದಗಿಸಿರುವ ದಾಖಲೆಗಳನ್ನು ಮುಂತಾದ ಮಾಹಿತಿಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನು ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಆಯ್ಕೆ ಮಾಡುವುದು.

e) ಅರ್ಜಿದಾರರು ಸಲ್ಲಿಸಿದ ಮೇಲ್ಕಂಡ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು. ಸ್ಥಿರಾಸ್ತಿಯ ದಾಖಲೆಗಳನ್ನು ಕೇಂದ್ರ ಕಛೇರಿಯಲ್ಲಿ ನಿಗಮದ ಕೇಂದ್ರ ಕಛೇರಿಯ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದ ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡುವುದು.

f) ಕೇಂದ್ರ ಕಛೇರಿಯಿಂದ ಆಡಳಿತಾತ್ಮಕ ಮಂಜೂರಾತಿ ಆದೇಶ ದೊರೆತ ನಂತರ ಅರ್ಜಿದಾರರು ಮಳಿಗೆ ಸ್ಥಾಪಿಸಲು ಒದಗಿಸಿರುವ ಸ್ಥಿರಾಸ್ತಿಯನ್ನು ನಿಗಮದ ಹೆಸರಿಗೆ ಸಾಲ ಮರುಪಾವತಿಯಾಗುವವರೆಗೂ **ಸರಳ ನೋಂದಾಯಿತ ಅಡಮಾನ (Simple Registered Mortgage Deed)** ಮಾಡಿಸುವುದು. ನಿಗಮದ ಹೆಸರು ದಾಖಲಾಗಿರುವ ಬಗ್ಗೆ ಇ.ಸಿ.ಯನ್ನು ಪಡೆಯಬೇಕು. ಹೀಗೆ ರಿಜಿಸ್ಟರ್ಡ್ ಮಾಡಿದ ಮೂಲ ಪತ್ರ ಹಾಗೂ ಇ.ಸಿ.ಯನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸುವುದು. ಕೇಂದ್ರ ಕಛೇರಿಯಲ್ಲಿ ಈ ದಾಖಲೆಗಳನ್ನು ಪರಿಶೀಲಿಸಿ ಆಯ್ಕೆ ಸಮಿತಿ ಮಂಜೂರು ಮಾಡಿರುವ ಮೊತ್ತದಲ್ಲಿ ಮಳಿಗೆ ಸ್ಥಾಪನೆಗೆ ಈ ಕೆಳಕಂಡ ಮೂರು ಹಂತದಲ್ಲಿ ಹಣವನ್ನು ಫಲಾನುಭವಿ ಹೆಸರು ಮತ್ತು ಅವರು ಹೊಂದಿರುವ ಬ್ಯಾಂಕ್ ಶಾಖೆಯ ಹೆಸರು ಮತ್ತು ಖಾತಾ ಸಂಖ್ಯೆಯನ್ನು ನಮೂದಿಸಿದ ಕ್ರಾಸ್ಡ್ ಚೆಕ್ ರಚಿಸಿ ಜಿಲ್ಲಾ ವ್ಯವಸ್ಥಾಪಕರಿಗೆ ಸಾಲ ಬಿಡುಗಡೆ ಆದೇಶದೊಂದಿಗೆ ಕಳುಹಿಸುವುದು.

| | | |
|---|---|---|
| 1) ಪಾಯ ಹಾಕುವ ಹಂತದಲ್ಲಿ(ಪ್ರಾರಂಭಿಕ ಹಂತ) | – | ಶೇ.25ರಷ್ಟು. |
| 2) ಪಾಯ ಮುಗಿದ ಹಂತದಲ್ಲಿ | – | ಶೇ.50ರಷ್ಟು. |
| 3) ಮಳಿಗೆಯ ಕಾಮಗಾರಿ ಪೂರ್ಣಗೊಂಡ ನಂತರ | – | ಶೇ.25ರಷ್ಟು. |

.....4

g) ನಿಗಮದಿಂದ ಮಂಜೂರು ಮಾಡಿದ ಮೊತ್ತದಲ್ಲಿ ಫಲಾನುಭವಿಯೆ ಸ್ವತಃ ಮಳಿಗೆ ನಿರ್ಮಿಸುವ ಗುತ್ತಿಗೆದಾರರ ನೇಮಕ ಮಾಡಿಕೊಂಡು, ಅವರ ಮೂಲಕ ಮಳಿಗೆ ನಿರ್ಮಿಸಿಕೊಳ್ಳಬೇಕು.

h) ಘಟಕ ಸ್ಥಾಪಿಸಲು ಮೊತ್ತ ಕಡಿಮೆಯಿದ್ದಲ್ಲಿ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯೇ ಭರಿಸತಕ್ಕದ್ದು.

i) ಜಿಲ್ಲಾ ವ್ಯವಸ್ಥಾಪಕರು ಸಾಲ ಬಿಡುಗಡೆಯಾದ ಫಲಾನುಭವಿಯಿಂದ/ಜಾಮೀನುದಾರರಿಂದ ನಿಗದಿತ ನಮೂನೆಯಲ್ಲಿ ಭದ್ರತಾ ದಾಖಲೆಗಳಿಗೆ ಸಹಿಮಾಡಿಸಿಕೊಂಡು, ದಾಖಲಾತಿಗಳನ್ನು ಸಂರಕ್ಷಿಸಿಡಬೇಕು.

j) ಫಲಾನುಭವಿಗಳು ಮಳಿಗೆ ಸ್ಥಾಪಿಸಿ, ನಡೆಸುತ್ತಿರುವ ಬಗ್ಗೆ ಭಾವಚಿತ್ರ ಹಾಗೂ ದೃಢೀಕರಣವನ್ನು ಜಿಲ್ಲಾ ವ್ಯವಸ್ಥಾಪಕರಿಗೆ ಒದಗಿಸಬೇಕು.

k) ವಿಮೆ: ಸಾಲದಿಂದ ಸ್ಥಾಪಿಸಿದ ಘಟಕವನ್ನು ವ್ಯಾಪಕ ವಿಮೆಗೆ ಒಳಪಡಿಸುವುದು. ವಿಮೆಗೆ ಒಳಪಡಿಸಿದ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಖಾತ್ರಿಪಡಿಸಿಕೊಳ್ಳುವುದು ಹಾಗೂ ವಿಮೆ ಪ್ರಿಮಿಯಂ ಮೊತ್ತವನ್ನು ಫಲಾನುಭವಿಯೆ ಭರಿಸುವುದು.

l) ವಿಮೆ ಮಾಡಿಸದಿದ್ದಲ್ಲಿ ಕಡೆಯ ಕಂತನ್ನು ತಡೆಹಿಡಿಯಲಾಗುವುದು.

13. <u>ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-</u> ದಿನಾಂಕ 07-03-2003ರ ನಿಗಮದ ಸುತ್ತೋಲೆ ಸಂಖ್ಯೆ ಕಪಿನಿ/ವ್ಯ/ಸಿಆರ್-100/2002-03ರನ್ವಯ ನಿಗದಿತ ಮೊತ್ತಕ್ಕೆ ನಿಗಮದಿಂದ ದಸ್ತಾವೇಜುಗಳನ್ನು ಪಡೆಯುವುದು.

- ಪ್ರಾಮಿಸರಿ ನೋಟ್
- ಡಿ.ಪಿ.ನೋಟ್ ಡೆಲಿವರಿ ಲೆಟರ್
- ಲೆಟರ್ ಆಫ್ ರೀಪೆಮೆಂಟ್
- ಹೈಪಾಥಿಕೇಷನ್ ಡೀಡ್
- ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್

} ಫಲಾನುಭವಿಯಿಂದ

- ಲೆಟರ್ ಆಫ್ ಗ್ಯಾರಂಟಿ -ಜಾಮೀನುದಾರರಿಂದ
- ಸಾಲದ ಮರುಪಾವತಿ ಅವಧಿ ಪೂರ್ಣಗೊಳ್ಳುವ ಮೊದಲು ಫಲಾನುಭವಿ ಹಾಗೂ ಜಾಮೀನುದಾರರಿಂದ ಋಣದ ಒಪ್ಪಿಗೆ ಪತ್ರ (Acknowledgement of Debt) ಪಡೆಯುವುದು.

14. <u>ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-</u> ಆಯ್ಕೆ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಲದ ವಿವರಗಳನ್ನು ಫಲಾನುಭವಿಗಳ ಹಾಗೂ ಜಾಮೀನುದಾರರ ಪೂರ್ಣ ವಿವರಗಳನ್ನು ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ನಿರ್ವಹಿಸುವುದು.

15. <u>ಮರುಪಾವತಿ ಅವಧಿ:-</u>

ಈ ಯೋಜನೆಯಲ್ಲಿ ಪಡೆದ ಸಾಲವನ್ನು ಫಲಾನುಭವಿ ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ 36 (3 ವರ್ಷಗಳು) ಕಂತುಗಳಲ್ಲಿ ಮರುಪಾವತಿಸಬೇಕು. ಇದರಲ್ಲಿ 2 ತಿಂಗಳ ವಿರಾಮಾವಧಿ ಇರುತ್ತದೆ.

16. **ಸಂಯೋಜನೆ:** ಈ ಯೋಜನೆಯ ಅನುಷ್ಠಾನವನ್ನು ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ನಗರ ಸಭೆ, ಪಟ್ಟಣ ಪಂಚಾಯತ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಕರ ಕುಶಲ ಅಭಿವೃದ್ಧಿ ನಿಗಮಗಳೊಂದಿಗೆ ಸಮನ್ವಯಗೊಳಿಸಿಕೊಂಡು ಅನುಷ್ಠಾನಗೊಳಿಸುವುದು.

17. ಉದ್ಯಮ ಶೀಲತಾ ತರಬೇತಿ: ಈ ಕಾರ್ಯಕ್ರಮದಲ್ಲಿ ಸೌಲಭ್ಯ ಮಂಜೂರು ಮಾಡಿದ ಫಲಾನುಭವಿಗಳಿಗೆ ಸಾಲ ಸದುಪಯೋಗ, ಸಾಲ ಮರುಪಾವತಿ, ಮಾರುಕಟ್ಟೆ ವ್ಯವಸ್ಥೆ ಮತ್ತು ವಿಮೆ ಕುರಿತು ಅರಿವು ಮೂಡಿಸಲು ಉದ್ಯಮ ಶೀಲತಾ ತರಬೇತಿ ಒದಗಿಸಲಾಗುವುದು. ಇದಕ್ಕಾಗಿ ರೂ.600/–ಗಳನ್ನು ಮೀರದಂತೆ ವೆಚ್ಚ ಮಾಡಲು ಅನುಮತಿಸಿದೆ.

18. **ಡಿ.ಸಿ.ಬಿ ತಯಾರಿಸಿ ಸಾಲ ವಸೂಲಾತಿಗೆ ಕ್ರಮ:–**

(a) ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಮರುಪಾವತಿಸಬೇಕು. ವಿಳಂಬದ ಅವಧಿಗೆ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಿ ವಸೂಲಿ ಮಾಡಬೇಕು.

(b) ಸಾಲ ಮರುಪಾವತಿಸದೆ ಸುಸ್ತಿಯಾದ ಫಲಾನುಭವಿಗಳಿಗೆ ನಿಯಮಾನಯಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು. ಹಾಗೂ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಸಾಲ ವಸೂಲಾತಿಗೆ ಕ್ರಮ ವಹಿಸಲಾಗುವುದು.

19. **ನಿಯಮಗಳಿಗೆ ತಿದ್ದುಪಡಿ:–** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ–2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

......6

ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯು 467 ಬಿಎಂಎಸ್ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:07-09-2015.

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 467 ಬಿಎಂಎಸ್ 2015, ದಿನಾಂಕ:05.08.2015ರ ಆದೇಶದ ಅನುಬಂಧದ ಕಂಡಿಕೆ 15ರ ಮೊದಲನೇ ಪಂಕ್ತಿಯಲ್ಲಿ "ಶೇ.4ರ ಬಡ್ಡಿ" ಎಂಬುದನ್ನು "ಶೇ.2ರ ಬಡ್ಡಿ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ.
6. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್, ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
9. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
11. ಸರ್ಕಾರದ ಉಪ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

----